2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 154/2019

| | | |
|---|---|---|
| ಸಾಕ್ಷಿದಾರರ ಹೆಸರು | - ಅಬ್ದುಲ್ ವಾಜೀದ್ | ಪಿಡಬ್ಲೂ - 5 |
| ತಂದೆಯ ಹೆಸರು | - ಶೇಕ್ ಅಬ್ದುಲ್ಲಾ | ಸಿಡಬ್ಲೂ -6 |
| ವಯಸ್ಸು | - 43 ವರ್ಷ | |
| ಉದ್ಯೋಗ | - ಕಾರ್ಪೆಂಟರ್ ಕೆಲಸ | |
| ವಾಸ ಸ್ಥಳ | - ಮುತ್ತಿನಕೊಪ್ಪ | |

ದಿನಾಂಕಃ 19.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿತರು ಗೊತ್ತು. ಪ್ರಾಸಾ.1, ಪ್ರಾಸಾ.3, ಪ್ರಾಸಾ.4, ಚಾಸಾ.5, ಚಾಸಾ.7 ರಿಂದ ಚಾಸಾ.12 ರವರು ಗೊತ್ತು. ಅವರು ನಮ್ಮ ಊರಿನವರು. ಪ್ರಾಸಾ.2 ಗೊತ್ತು, ಆಕೆ ಆರೋಪಿತರ ಮಗಳು.

2. ಆರೋಪಿತರು ತಾವು ಮೂಲತಃ ಕೇರಳದವರು ಎಂದು ಒಂದು ಬಾರಿ ಮತ್ತು ಮತ್ತೊಮ್ಮೆ ತಾವು ಮಂಗಳೂರಿನವರು ಎಂದು ಹೇಳುತ್ತಿದ್ದರು. ಘಟನೆಯ 2 ವರ್ಷಗಳ ಹಿಂದೆ ಅವರು ಮುತ್ತಿನಕೊಪ್ಪಕ್ಕೆ ಬಂದು ವಾಸವಾಗಿದ್ದರು. ಘಟನೆಯ 4-5 ತಿಂಗಳ ಹಿಂದೆ ಆರೋಪಿತರು ಪ್ರಾಸಾ.3 ರವರಿಗೆ ಸೇರಿದ ಕಟ್ಟಡದಲ್ಲಿರುವ ಒಂದು ಮಳಿಗೆಯಲ್ಲಿ ಕ್ಯಾಂಟೀನನ್ನು ನಡೆಸುತ್ತಿದ್ದರು. ಆರೋಪಿತರಿಗೆ ಒಂದು ಗಂಡು ಮತ್ತು ಒಂದು ಹೆಣ್ಣು ಮಗುವಿದೆ.

3. ಸದರಿ ಕ್ಯಾಂಟೀನ್ ಇದ್ದ ಕಟ್ಟಡದ ಪಕ್ಕದಲ್ಲಿ ಪ್ರಾಸಾ.3 ರವರಿಗೆ ಸೇರಿದ ಖಾಲಿ ಜಾಗವಿದೆ. ಅದಕ್ಕೆ ಒಂದು ಕಾಂಪೌಂಡ್ ಇತ್ತು.

ಅದನ್ನು ಫ್ರಾಸಾ.3 ರವರು ತೆರವುಗೊಳಿಸಬೇಕಾಗಿತ್ತು. ಆ ವಿಚಾರವಾಗಿ ಆರೋಪಿತರು ಫ್ರಾಸಾ.3 ರವರೊಂದಿಗೆ ಜಗಳ ಮಾಡುತ್ತಿದ್ದರು.

4. ಈಗ್ಗೆ 4 ವರ್ಷ 4 ತಿಂಗಳ ಹಿಂದೆ ಒಂದು ದಿನ ಸಂಜೆ 6.30 ಗಂಟೆ ಸಮಯದಲ್ಲಿ ನಾನು ಫ್ರಾಸಾ.3 ರವರ ಕಟ್ಟಡದಿಂದ ಸುಮಾರು 40-50 ಅಡಿ ದೂರದಲ್ಲಿ ಇದ್ದೆನು. ಆಗ ನನ್ನೊಂದಿಗೆ ಚಾಸಾ.5 ಮೊಹಮ್ಮದ್ ಅನ್ಸರ್, ಚಾಸಾ.7 ಜಾಬೀರ್, ಚಾಸಾ.11 ಶ್ರೀನಿವಾಸ, ಚಾಸಾ.10 ಪ್ರಸನ್ನ, ಫ್ರಾಸಾ.4 ಪ್ರಕಾಶ್ ಮತ್ತು ಇತರರು ಇದ್ದರು. ಆಗ ಫ್ರಾಸಾ.3 ರವರು ತಮ್ಮ ಕಟ್ಟಡದ ಪಕ್ಕದಲ್ಲಿರುವ ಅವರಿಗೆ ಸೇರಿದ ಖಾಲಿ ಜಾಗದಲ್ಲಿ ಕೆಲಸ ಮಾಡಿಸುತ್ತಿದ್ದರು. ಆಗ ಆರೋಪಿತರು ಅಲ್ಲಿಗೆ ಹೋಗಿ ಫ್ರಾಸಾ.3 ರವರೊಂದಿಗೆ ಸದರಿ ಕಾಂಪೌಂಡಿನ ವಿಚಾರವಾಗಿ ಫ್ರಾಸಾ.3 ರವರ ಕೊರಳಪಟ್ಟಿಯನ್ನು ಹಿಡಿದುಕೊಂಡು ಸೂಳೆ ಮಗ, ಬೋಳಿ ಮಗ ಎಂದು ಕೆಟ್ಟ ಪದಗಳಿಂದ ಬೈದರು. ಆಗ ಫ್ರಾಸಾ.3 ರವರು ನ.ರಾ.ಪುರ ಪೊಲೀಸ್ ಠಾಣೆಗೆ ಫೋನ್ ಮಾಡಿದರು. ನಂತರ ನ.ರಾ.ಪುರ ಪೊಲೀಸ್ ಠಾಣೆಯ ಒಬ್ಬ ಪೊಲೀಸರು ಅಲ್ಲಿಗೆ ಬಂದರು. ಅಷ್ಟರಲ್ಲಿ 2 ನೇ ಆರೋಪಿ ಫ್ರಾಸಾ.3 ರವರ ವಿರುದ್ಧ ಪೊಲೀಸರಿಗೆ ದೂರು ಕೊಡುತ್ತೇನೆ ಎಂದು ಹೇಳಿ ಅಲ್ಲಿಂದ ಹೊರಟು ಹೋಗಿದ್ದನು.

5. 1 ನೇ ಆರೋಪಿ ಪೊಲೀಸರಿಗೆ ಕೆಲವು ದಾಖಲೆಗಳನ್ನು ಕೊಟ್ಟರು. ಆಗ ಪೊಲೀಸರು ದಾಖಲೆಗಳನ್ನು ನೋಡುತ್ತಿದ್ದಾಗ 1 ನೇ ಆರೋಪಿ ತಮ್ಮ ಕ್ಯಾಂಟೀನ್ ನ ಒಳಗೆ ಹೋಗಿ ತಮ್ಮ ಇಬ್ಬರು ಮಕ್ಕಳನ್ನು ಹೊರಗೆ ಎಳೆದುಕೊಂಡು ಬಂದಳು. 1 ನೇ

ಆರೋಪಿ ಫ್ರಾಸಾ.3 ರವರನ್ನು ಕುರಿತು ತನ್ನ ಮಕ್ಕಳನ್ನು ಸಾಯಿಸಿ ತಾನು ಆತ್ಮಹತ್ಯೆ ಮಾಡಿಕೊಂಡು ನಿಮ್ಮ ಮೇಲೆ ಹಾಕಿ ನಿಮಗೆ ಶಿಕ್ಷೆ ಕೊಡಿಸುತ್ತೇನೆ ಎಂದು ಹೇಳಿ ಕ್ಯಾಂಟೀನ್ ನ ಒಳಗಿನಿಂದ ಬರುತ್ತಾ ತನ್ನ ಕೈಯಲ್ಲಿ ಹಿಡಿದುಕೊಂಡು ಬಂದಿದ್ದ ಚಾಕುವಿನಿಂದ 1 ನೇ ಆರೋಪಿ ತನ್ನ ಮಗಳಾದ ಫ್ರಾಸಾ.2 ರವರ ಕುತ್ತಿಗೆಯ ಬಲಭಾಗಕ್ಕೆ ಕುಯ್ದುರು. ಆಗ ಫ್ರಾಸಾ.2 ರವರಿಗೆ ಆ ಭಾಗದಲ್ಲಿ ಗಾಯವಾಗಿ ರಕ್ತ ಬಂದಿತು.

6. ನಂತರ ನಾನು ಫ್ರಾಸಾ.2 ರವರನ್ನು ಮುತ್ತಿನ ಕೊಪ್ಪ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದೆನು. ಅದಾದ 2 ದಿನಗಳ ಬಳಿಕ ನ.ರಾ.ಪುರ ಪೊಲೀಸರು ಠಾಣೆಗೆ ಕರೆಯಿಸಿ ಘಟನೆಯ ಬಗ್ಗೆ ನನ್ನನ್ನು ವಿಚಾರಿಸಿದರು. ಆಗ ನಾನು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ ಹೇಳಿಕೆಯನ್ನು ನೀಡಿದ್ದೇನೆ.

7. 1 ನೇ ಆರೋಪಿ ಫ್ರಾಸಾ.2 ರವರಿಗೆ ಕುಯ್ದು ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ಮು.ಮಾ.1 ಎಂದು ಗುರುತಿಸಲ್ಪಟ್ಟಿರುವ ಚಾಕುವನ್ನು ನೋಡಿ ಗುರುತಿಸಿರುತ್ತಾರೆ.

8. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಈ ದಿನ ಗೈರು ಹಾಜರಿದ್ದು ಅವರ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲವಂದು ಆರೋಪಿತರ ಪರ ವಕೀಲರು ಸಲ್ಲಿಸಿರುವ ವಿನಾಯಿತಿ ಅರ್ಜಿಯಲ್ಲಿ ತಿಳಿಸಿರುತ್ತಾರೆ.

(ಪಾಟೀ ಸವಾಲು: ಆರೋಪಿತರ ಪರ ವಕೀಲರು ಪ್ರತ್ಯಕ್ಷ ಸಾಕ್ಷಿದಾರರು ಎಂದು ಅಂತಿಮ ವರದಿಯಲ್ಲಿ ನಮೂದಿಸಿರುವ ಸಾಕ್ಷಿದಾರರ ವಿಚಾರಣೆಯಾಗುವವರೆಗೆ ಪ್ರಸ್ತುತ ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿ ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯವು

ಈ ಹಿಂದೆ ಪುರಸ್ಕರಿಸಿರುವ ಕಾರಣ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೆಚ್